## ಜ್ವರದ ಲಸಿಕೆ ಒಳ್ಳೆಯದು

ಗರ್ಭವತಿಯರು ಜ್ವರದ ಲಸಿಕೆ ಹಾಕಿಸಿಕೊಳ್ಳುವುದು ತಾಯಿ ಹಾಗೂ ಭ್ರೂಣದಲ್ಲಿರುವ ಮಗುವಿನ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಇದರಿಂದ ಶಿಶುಮರಣಗಳನ್ನೂ ತಡೆಗಟ್ಟಬಹುದು ಎಂದು ನೂತನ ಅಧ್ಯಯನ ಹೇಳಿದೆ.

ಜ್ವರ ತೀವ್ರವಾದ ಸಂದರ್ಭದಲ್ಲಿ ಭ್ರೂಣದಲ್ಲಿಯೇ ಮಗು ಸಾವನ್ನಪ್ಪುವ ಸಾಧ್ಯತೆಯಿದೆ. ಆದ್ದರಿಂದ ಜ್ವರ ತಡೆಗೆ ಲಸಿಕೆಯನ್ನು ಹಾಕಿಸಿಕೊಂಡರೆ ತಾಯಿ ಹಾಗೂ ಮಗು ಇಬ್ಬರಿಗೂ ಕ್ಷೇಮ ಎಂದು ಹೇಳುತ್ತಾರೆ ಸಂಶೋಧನೆ ಕೈಗೊಂಡ ಅಮೆರಿಕಾದ ತಜ್ಞರು.

'ಏನೇ ಆದರೂ ಗರ್ಭವತಿಯರು ತಪ್ಪದೆ ಜ್ವರ ನಿಯಂತ್ರಕ ಲಸಿಕೆ ಹಾಕಿಸಿಕೊಳ್ಳುವುದು ಉತ್ತಮ' ಎಂದು ಅಭಿಪ್ರಾಯಪಡುತ್ತಾರೆ ಸಂಶೋಧನಾ ತಂಡದಲ್ಲಿರುವ ಭಾರತೀಯ ಮೂಲದ ವೈದ್ಯೆ ಗೀತಾ ಸ್ವಾಮಿ.

## ಮದ್ಯಕ್ಕೆ ಬಲಿಹಾಕುವ ಜಾಹೀರಾತು

ಮಾಧ್ಯಮದಲ್ಲಿ ಪ್ರಸಾರವಾಗುವ ಜಾಹೀರಾತುಗಳು ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ. ಅದರಲ್ಲೂ, ಕುರುಕಲು ತಿಂಡಿ ಹಾಗೂ ಮದ್ಯಪಾನ ಸೇವಿಸಲು ಇಂತಹ ಜಾಹೀರಾತುಗಳೇ ಪ್ರಚೋದಿಸುತ್ತವೆ ಎಂದು ನೂತನ ಅಧ್ಯಯನವೊಂದು ಹೇಳಿದೆ.

ಕ್ರೀಡಾ ಸಬಂಧಿ ವಾಣಿಜ್ಯ ಜಾಹೀರಾತುಗಳೇ ಮಕ್ಕಳ ಮೇಲೆ ಹೆಚ್ಚು ಪ್ರಭಾವ ಬೀರುತ್ತಿವೆ ಎಂದು ಆಸ್ಟ್ರೇಲಿಯಾದ ಸಂಶೋಧಕರು ಹೇಳಿದ್ದಾರೆ. ಆಹಾರ ಹಾಗೂ ಪಾನೀಯ ಕಂಪೆನಿಗಳು ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಮೇಲಿಂದ ಮೇಲೆ ಜಾಹೀರಾತುಗಳನ್ನು ಬಿತ್ತರಿಸುವುದರಿಂದ ಎಳೆಯರ ಸುಪ್ತ ಪ್ರಜ್ಞೆಯಲ್ಲಿ ಜಾಹೀರಾತಿನ ಚಿತ್ರ ಅಚ್ಚಳಿಯದೆ ಉಳಿಯುತ್ತದೆ. ಹಾಗಾಗಿ ಫಾಸ್ಟ್ ಫುಡ್ ಹಾಗೂ ಪಾನೀಯಗಳ ಸೇವನೆಯತ್ತ ಮಕ್ಕಳು ಆಕರ್ಷಿತರಾಗುತ್ತಾರೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸಂಶೋಧಕರು 12ವರ್ಷಗಳ 160 ಮಕ್ಕಳನ್ನು ತಮ್ಮ ಅಧ್ಯಯನಕ್ಕೆ ಒಳಪಡಿಸಿದ್ದರು.

## ಬಹು ರೋಗಗಳ ತಾಯಿ 'ಏಕಾಂಗಿ'

ಒಂಟಿತನವನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳಬೇಡಿ. ಅದು ಸಂಪೂರ್ಣ ನಿಮ್ಮ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ. ಹಲವು ರೋಗಗಳ ಜನನಕ್ಕೆ ಭೂಮಿಕೆಯನ್ನೂ ಅದು ನಿರ್ಮಿಸುತ್ತದೆ ಎಂದು ನೂತನ ಅಧ್ಯಯನ ಎಚ್ಚರಿಕೆಯನ್ನು ಕೊಟ್ಟಿದೆ.

ಜನ ಸಂಪರ್ಕವಿಲ್ಲದೆ ಏಕಾಂಗಿ ಬದುಕು ಅನೇಕ ರೀತಿಯ ಆರೋಗ್ಯ ಸಮಸ್ಯೆಯನ್ನು ತಂದೊಡ್ಡುತ್ತದೆ. ಅದರಿಂದ ಅವಧಿ ಪೂರ್ವ ಸಾವು ಸಂಭವಿಸುವ ಸಾಧ್ಯತೆ ಹೆಚ್ಚು ಎಂದು ಈ ಮುಂಚಿನ ಅಧ್ಯಯನಗಳು ದೃಢಪಡಿಸಿದ್ದವು. ಇವೆಲ್ಲವೂ ಸೇರಿದಂತೆ, ಏಕಾಂಗಿತನದಿಂದ ರೋಗ ನಿರೋಧಕ ಶಕ್ತಿ ಕುಂದುತ್ತದೆ. ಅಲ್ಲದೆ, ಹೃದ್ರೋಗ, ಮಧುಮೇಹ ಹಾಗೂ ಮರೆಗುಳಿತನ ಕೂಡ ಕಾಡುತ್ತದೆ ಎಂದು ಇತ್ತೀಚಿನ ಅಧ್ಯಯನ ಹೇಳುತ್ತದೆ.

## ಕಿಡ್ನಿ ಬಾಧಿಸುವ ಹೃದಯ ಬಡಿತ

ಪ್ರೌಢಾವಸ್ಥೆಯಲ್ಲಿ ಯಾರಿಗೆ ಹೃದಯ ಬಡಿತದಲ್ಲಿ ಏರಿಳಿತ ಉಂಟಾಗುತ್ತದೆಯೋ, ಅಂತವರಿಗೆ ಮೂತ್ರಪಿಂಡ ವಿಫಲವಾಗುವ ಸಾಧ್ಯತೆ ಕೂಡ ಹೆಚ್ಚು ಎಂದು ಹೊಸ ಅಧ್ಯಯನವೊಂದು ಹೇಳಿದೆ.

ಅನಿಯಮಿತ ಹೃದಯ ಬಡಿತದಿಂದ ಕಿಡ್ನಿ ವೈಫಲ್ಯ ಉಂಟಾಗುತ್ತದೆ. ಮುಂದೆ ಅದರಿಂದ ಪಾರ್ಶ್ವವಾಯು ಕೂಡ ಬರಬಹುದು ಅಥವಾ ಸಾವು ಸಂಭವಿಸಬಹುದು ಎಂದು ಈ ಅಧ್ಯಯನದಿಂದ ತಿಳಿದು ಬಂದಿದೆ.

-ಟಿಪ್ಸ್





ಉಪಯೋಗಿಸುವ ವಿಧಾನ

ಅಧಿಕವಾದ ಕ್ರಿಮಿಕೀಟಗಳ ಸೋಂಕಿದ್ದರೆ ಧಾರಕಕ್ಕೆ ಸ್ಪ್ರೇಯರ್ ಜೋಡಿಸಿ ನೇರವಾಗಿ ಸ್ಪ್ರೇ ಮಾಡಬಹುದು.

ಅಥವಾ

ಮನೆಯನ್ನು ಸ್ವಚ್ಛಗೊಳಿಸಲು ಒಂದು ಬಕೆಟ್ ನೀರಿಗೆ 2-3 ಕ್ಯಾಪ್‌ಗಳ ಪ್ರಮಾಣದ ಗಿಡಮೂಲಿಕೆ ಖಟ್ನಿಲ್‌ನ್ನು ಹಾಕಿ ಮಿಶ್ರಣ ಮಾಡಿ

..... ಈ ಕ್ರಿಮಿ ಕೀಟಗಳಿಂದ ಮಲೇರಿಯ, ಕಾಲರ, ಡೆಂಗ್ಯೂ, ಆಮಶಂಕೆ, ಗಂದೆಗಳು ಮತ್ತು ಇನ್ನೂ ಅನೇಕ ಕಾಯಿಲೆಗಳು ಉಂಟಾಗತ್ತವೆ.

ಇಂತಹ ತೊಂದರೆ ಬಾರದಂತೆ ತಡೆಯಲು, ಕ್ರಿಮಿ ಕೀಟಗಳ ನಿವಾರಣೆಗಾಗಿ ಪ್ರತಿದಿನ ಗಿಡಮೂಲಿಕೆ ಖಟ್ನಿಲ್‌ನಿಂದ ನೆಲವನ್ನು ಒರೆಸಬೇಕು. ಈ ಗಿಡಮೂಲಿಕೆ ಖಟ್ನಿಲ್ ನೊಣಗಳು, ಇರುವೆಗಳು, ಸೊಳ್ಳೆಗಳು, ತಿಗಣೆಗಳು, ಜಿರಳೆಗಳು, ಹಲ್ಲಿಗಳು, ಜೇಡ ಮುಂತಾದ ಕ್ರಿಮಿಕೀಟಗಳನ್ನು ನಿವಾರಿಸುತ್ತದೆ. ಇದು ಗಿಡಮೂಲಿಕೆಯಿಂದ ತಯಾರಾಗಿರುವುದರಿಂದ ಯಾವುದೇ ಅಡ್ಡ ಪರಿಣಾಮವಿಲ್ಲದೆ ಸುರಕ್ಷಿತವಾದುದಾಗಿದೆ. ಅಪ್ಯಾಯಮಾನವಾದ ಸುಗಂಧ ಹೊಂದಿದೆ. ನೆಲವನ್ನು ಚೆನ್ನಾಗಿ ಸ್ವಚ್ಛಗೊಳಿಸಿ ಹೊಳೆಯುವಂತೆ ಮಾಡುತ್ತದೆ.

SUPER STOCKIST FOR KARNATAKA
M/s. GIRIJA ASSOCIATES
No.21/22, 1st Floor, J.J. Mansion, H.Siddaiah Road,
Bangalore-560 002. Ph: 22223838 / 22243939 / 22276061

MIDAS HYGIENE INDUSTRIES (P) LIMITED
Tel. No.: 022 32094336
Email: midas.09@gmail.com
Website: www.midashygiene.biz
Trade enquiries solicited